(384)

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\1815\2016\ಉನಿವಿ–4

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 10/07/2019

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** ಸರ್ಕಾರಿ ನೌಕರರಾದ ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕ್ ಸರ್ಕಾರಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕರುಗಳಾದ 1)ಶ್ರೀಮತಿ.ಎಸ್.ಕೆ.ಸರೋಜಮ್ಮ, ಮತ್ತು 2) ಶ್ರೀ.ವಿ.ಆರ್.ನಾಗರಾಜ [ಪ್ರಭಾರ] ರವರ ಕರ್ತವ್ಯ ಲೋಪದ ಬಗ್ಗೆ.

**********

ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕ್ ಹುದುಕುಳ ಗ್ರಾಮ ಮತ್ತು ಅಂಚೆ ನಿವಾಸಿಯಾದ ಶ್ರೀ.ಹೆಚ್.ವಿ.ಶ್ರೀನಿವಾಸ ಬಿನ್ ಲೇಟ್.ವೆಂಕಟೇಶ ನಾಯ್ಕ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕ್ 1) ಸರ್ಕಾರಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀಮತಿ.ಎಸ್.ಕೆ.ಸರೋಜಮ್ಮ, 2) ಜಿಲ್ಲಾ ಪಂಚಾಯತ್‌ನ ತಾಂತ್ರಿಕ ಸಲಹೆಗಾರರಾದ ಶ್ರೀ.ಪ್ರಭಣ್ಣ, 3)ಎಸ್‌ಡಿಎಂಸಿ ಅಧ್ಯಕ್ಷರಾದ ಶ್ರೀ.ಹೆಚ್.ಎಸ್.ರಾಮಶೆಟ್ಟಿ ಮತ್ತು 4) ಗುತ್ತಿಗೆದಾರರು ಹಾಗೂ ಪದನಿಮಿತ್ತ ಸದಸ್ಯರಾದ ಶ್ರೀ.ಹೆಚ್.ಎಂ.ರವಿ (ಇನ್ನು ಮುಂದೆ ಕ್ರಮವಾಗಿ, '1 ರಿಂದ 4ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ಬಂಗಾರಪೇಟೆ ತಾಲ್ಲೂಕ್ ಹುದುಕುಳ ಗ್ರಾಮದ ಸರ್ಕಾರಿ ಪ್ರೌಢಶಾಲೆಗೆ 2013–14ನೇ ಸಾಲಿನಲ್ಲಿ 05 ಹೆಚ್ಚುವರಿ ಶಾಲಾ ಕೊಠಡಿಗಳು ಮಂಜೂರಾಗಿದ್ದು, ಕಾಮಗಾರಿಗೆ ಕಚ್ಚಾ ಸಾಮಗ್ರಿ ಬಳಸಿ, ಕಳಪೆಯಾಗಿ ನಿರ್ವಹಿಸಿ, ಸರ್ಕಾರಿ ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆಂದು ಹೇಳಿದ್ದಾರೆ.

385'



3. ದೂರಿನ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ಆರಕ್ಷಕ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕೋಲಾರ ರವರಿಗೆ ಕೇಳಲಾಗಿ, ಆರಕ್ಷಕ ಉಪಾಧೀಕ್ಷಕರು (ಇನ್ನು ಮುಂದೆ, 'ತನಿಖಾಧಿಕಾರಿಗಳು-1' ಎಂದು ಕರೆಯಲ್ಪಡುತ್ತಾರೆ) ತಮ್ಮ ತನಿಖಾ ವರದಿಯಲ್ಲಿ –

> ಕಾಮಗಾರಿಗೆ ಒಟ್ಟು ₹30,89,660/- ಖರ್ಚಾಗಿದ್ದು, ತುಲನಾತ್ಮಕವಾಗಿ ಲೆಕ್ಕಾಚಾರ ಮಾಡಿದಾಗ ಹಣದ ದುರುಪಯೋಗ ಕಂಡು ಬಂದಿಲ್ಲ. ಕಾಮಗಾರಿಗೆ ಬಳಸಿದ ಸಾಮಗ್ರಿಗಳ ಗುಣಮಟ್ಟ ಹಾಗೂ ಮಿಶ್ರಣದ ಅನುಪಾತಗಳ ಬಗ್ಗೆ ಖಾತರಿಪಡಿಸಿಕೊಳ್ಳಲು ನುರಿತ ತಜ್ಞರಿಂದ ಆಧುನಿಕ ಪ್ರಯೋಗಾಲಯದಲ್ಲಿ ಪರೀಕ್ಷೆಗೊಳಪಡಿಸಿ, ಅಭಿಪ್ರಾಯ ಪಡೆಯುವುದು ಅವಶ್ಯವಾಗಿದೆ. ಕಟ್ಟಡ ಮಾರ್ಪಾಡಿಗೆ ಸಂಬಂಧಿಸಿದಂತೆ, ಎಸ್‌ಡಿಎಂಸಿ ಅಧ್ಯಕ್ಷರು, ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಗುತ್ತಿಗೆದಾರರು ಸಂಬಂಧಿಸಿದ ಅಧಿಕಾರಿಗಳಿಂದ ಅನುಮೋದನೆಯನ್ನು ಪಡೆದಿಲ್ಲವೆಂದು ಹೇಳಿದ್ದಾರೆ.

4. ದೂರಿನ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ ರವರಿಗೆ ಕೇಳಲಾಗಿ, ಸಹಾಯಕ ಕಾರ್ಯಪಾಲಕ ಅಭಿಯಂತರರು-2 (ಇನ್ನು ಮುಂದೆ, 'ತನಿಖಾಧಿಕಾರಿಗಳು-2' ಎಂದು ಕರೆಯಲ್ಪಡುತ್ತಾರೆ) ರವರು ತಮ್ಮ ತನಿಖಾ ವರದಿಯಲ್ಲಿ –

> ಆಪಾದಿತ ಕಾಮಗಾರಿಯನ್ನು ಪರಿಶೀಲಿಸಿದಾಗ, ಕಟ್ಟಡದ ಒಳಭಾಗದ ಗೋಡೆಗಳ ಕೆಲವೆಡೆ ಬಿರುಕು ಬಿಟ್ಟಿರುವುದನ್ನು ಗಮನಿಸಿದೆ, ಸದರಿ ಕಾಮಗಾರಿಯ ಬಗ್ಗೆ ದೂರುದಾರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:4928/2014 (ಜಿಎಂ-ಆರ್‌ಇಎಸ್) ಅನ್ನು ದಾಖಲಿಸಿದ್ದಾರೆ. ಸದರಿ ಕಾಮಗಾರಿಯನ್ನು ಕಳಪೆಯಾಗಿ ನಿರ್ವಹಣೆ ಮಾಡಿದ ಬಗ್ಗೆ ಪೂರಕ ದಾಖಲೆಗಳು ಲಭ್ಯವಿಲ್ಲದಿದ್ದ ಕಾರಣ, ನ್ಯಾಯಾಲಯವು ದಿನಾಂಕ:06/06/14ರಂದು ರಿಟ್ ಅರ್ಜಿಯ ವಿಚಾರಣೆಯನ್ನು ಮುಕ್ತಾಯಗೊಳಿಸಿದೆ. ಕಾಮಗಾರಿಗೆ ಸಂಬಂಧಿಸಿದ ದಾಖಲೆಗಳನ್ನು ಎದುರುದಾರರು ಹಾಜರುಪಡಿಸಿದ್ದು, ಸದರಿ ದಾಖಲೆಗಳಲ್ಲಿ ಕಾಮಗಾರಿಯ ಗುಣಮಟ್ಟವು ತೃಪ್ತಿಕರವಾಗಿರುವುದಾಗಿ ದಾಖಲಾಗಿದೆ. ಗೋಡೆಯಲ್ಲಿ ಕಂಡು ಬಂದಿರುವ ಬಿರುಕುಗಳು ಪ್ಲಾಸ್ಟರಿಂಗ್ ಪದರದಲ್ಲಿ ಉಂಟಾಗಿರುವಂತೆ ಕಂಡು ಬಂದಿರುವ ಕಾರಣ, ಕಟ್ಟಡದ ಬಾಳಿಕೆಗೆ ಯಾವುದೇ ಧಕ್ಕೆಯಾಗುವ ಸಾಧ್ಯತೆ ಇಲ್ಲ. ಆದ್ದರಿಂದ, ದೂರುದಾರರ ಆರೋಪಗಳು ಸಾಬೀತಾಗಿಲ್ಲವೆಂದು ಹೇಳಿದ್ದಾರೆ.

5. ತನಿಖಾ ವರದಿಗೆ ದೂರುದಾರರಿಂದ ಉತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಉತ್ತರದಲ್ಲಿ –

> ತನಿಖಾ ವರದಿಯ ಅಂಶಗಳನ್ನು ಅಲ್ಲಗಳೆಯುತ್ತಾ, ಸದರಿ ತನಿಖಾಧಿಕಾರಿಗಳು ಪ್ರಕರಣವನ್ನು ಮುಚ್ಚಿ ಹಾಕಲು ಯತ್ನಿಸಿದ್ದಾರೆಂದು ಹೇಳಿದ್ದಾರೆ.

BD/1815/16

(386)



6. ಹುದುಕುಳ ಸರ್ಕಾರಿ ಪ್ರೌಢ ಶಾಲೆಯ ಪ್ರಭಾರಿ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ.ವಿ.ಆರ್.ನಾಗರಾಜ್ ರವರನ್ನು 5ನೇ ಎದುರುದಾರರನ್ನಾಗಿ ಸೇರಿಸಿ, ಎಲ್ಲಾ ಎದುರುದಾರರುಗಳಿಂದ ದೂರಿಗೆ ಮತ್ತು 1ನೇ ತನಿಖಾ ವರದಿಗೆ ಆಕ್ಷೇಪಣೆಗಳನ್ನು ಕೇಳಲಾಯಿತು.

7. ಒಂದನೇ (1ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ರಾಜ್ಯ ವಲಯ ವಿಶೇಷ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಶಾಲೆಗೆ ಹೆಚ್ಚುವರಿ ಐದು ಕೊಠಡಿಗಳು ಮಾತ್ರ ಮಂಜೂರಾಗಿದ್ದು, ಯಾವುದೇ ಹಣ ದುರುಪಯೋಗವಾಗದಂತೆ ಕಾಮಗಾರಿಯನ್ನು ಪೂರ್ಣಗೊಳಿಸಿದೆಯೆಂದು ಹೇಳಿದ್ದಾರೆ.

8. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ ಸಂಸ್ಥೆಯಲ್ಲಿ ದಿ:02/08/12 ರಿಂದ ಸರ್ವ ಶಿಕ್ಷಣ ಅಭಿಯಾನ ಯೋಜನೆ ಅಡಿಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸಿದ್ದು, ಪ್ರೌಢ ಶಾಲಾ ಸಿವಿಲ್ ಕಾಮಗಾರಿ ಕಟ್ಟಡ ನಿರ್ವಹಣೆ ತಮ್ಮ ಜವಾಬ್ದಾರಿಗೆ ಬರುತ್ತಿರಲಿಲ್ಲವಾದ್ದರಿಂದ, ದೂರಿಗೆ ಸಂಬಂಧಿಸಿದ ಶಾಲೆಯ ಕಟ್ಟಡದ ಮೇಲ್ವಿಚಾರಣೆಗೆ ತಾವು ಹೋಗಿಲ್ಲವೆಂದು ಹೇಳಿದ್ದಾರೆ.

9. ಮೂರರಿಂದ 5ನೇ ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ, 1ನೇ ಎದುರುದಾರರ ಆಕ್ಷೇಪಣೆಯ ಅಂಶಗಳನ್ನೇ ಪುನರುಚ್ಚರಿಸಿದ್ದಾರೆ.

10. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) 2012-13ನೇ ಸಾಲಿನ ರಾಜ್ಯ ವಲಯ ವಿಶೇಷ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಸರ್ಕಾರಿ ಪ್ರೌಢಶಾಲೆಗಳಿಗೆ ಹೆಚ್ಚುವರಿ ಕೊಠಡಿ ನಿರ್ಮಾಣದ ಬಗ್ಗೆ ಅನುದಾನ ಬಿಡುಗಡೆ ಮಾಡಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಜ್ಞಾಪನ ಸಂ:ಯೋ11\ವಿ.ಅ.ಯೋ\ಹೆ.ಕೊ.ನಿ\05\12-13 ದಿನಾಂಕ:06/03/13ನ್ನು ಹೊರಡಿಸಿದ್ದಾರೆ;
2) ಸದರಿ ಯೋಜನೆಯನ್ವಯ ಬಂಗಾರಪೇಟೆ ತಾಲ್ಲೂಕ್ ಹುದುಕುಳ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ಹೊಸದಾಗಿ 05 ಶಾಲಾ ಕೊಠಡಿಗಳನ್ನು ನಿರ್ಮಿಸಲು ₹31,55,000/-ಗಳ ಅನುದಾನವನ್ನು ಬಿಡುಗಡೆ

(೩೪೭)



ಮಾಡಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು, ಕೋಲಾರ ಜಿಲ್ಲೆ ರವರು ಜ್ಞಾಪನ ಪತ್ರ ಸಂಖ್ಯೆ:ಆ–1:ಸ.ಪ್ರೌ:ರಾ.ವಿ.ಯೋ.ಹೆ.ಕೋ.ನಿ:01\12–13 ದಿನಾಂಕ:12/03/2013ನ್ನು ಹೊರಡಿಸಿದ್ದಾರೆ. ಸದರಿ ಜ್ಞಾಪನದಲ್ಲಿ ಆದೇಶಿಸಿದ ಮೇರೆಗೆ ಅನುದಾನವು ಹುದುಕುಳ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್‌ಡಿಎಂಸಿ) ಯ ಜಂಟಿ ಖಾತೆಗೆ ಒಟ್ಟು ₹31,55,000/–ಗಳು ಜಮಾ ಆಗಿದೆ;

3) ಖರೀದಿಗೆ ಸಂಬಂಧಿಸಿದಂತೆ, ಪ್ರಸ್ತುತ ಜಾರಿಯಲ್ಲಿರುವ ಖರೀದಿ ನಿಯಮಗಳನ್ನು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧ್ಯಾದೇಶ, 2000 ಮತ್ತು ಅದರಡಿಯಲ್ಲಿನ ನಿಯಮಗಳನ್ನು ಚಾಚು ತಪ್ಪದೇ ಕಡ್ಡಾಯವಾಗಿ ಹಾಗೂ ಕಟ್ಟುನಿಟ್ಟಾಗಿ ಪಾಲಿಸ ಬೇಕೆಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಜ್ಞಾಪನ ಸಂ:ಯೋ11\ವಿ.ಅ.ಯೋ\ಹೆ.ಕೊ.ನಿ\05\12–13 ದಿನಾಂಕ:06/03/13 ಮತ್ತು ಜ್ಞಾಪನ ಸಂಖ್ಯೆ:ಯೋ11\2014–15\ಆವ್ಯ\ಎಸ್‌ಡಿಪಿ\7\13–14 ದಿನಾಂಕ:01/12/14ಗಳಲ್ಲಿ ಹೇಳಿದೆ;

4) ಆದರೆ, ಕೆಟಿಪಿಪಿ ಕಾಯಿದೆ ಅನ್ವಯ ಟೆಂಡರ್ ಕರೆದು ಸದರಿ ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸದೇ ಹುದುಕುಳ ಸರ್ಕಾರಿ ಪ್ರೌಢಶಾಲೆಯ ಎಸ್‌ಡಿಎಂಸಿ ಯ ಪದನಿಮಿತ್ತ ಸದಸ್ಯರಾದ 4ನೇ ಎದುರುದಾರರಿಗೆ ಶಾಲಾ ಕಟ್ಟಡದ ಗುತ್ತಿಗೆಯನ್ನು ನೀಡಲು ಎಸ್‌ಡಿಎಂಸಿ ಯ ಅಧ್ಯಕ್ಷರಾದ 3ನೇ ಎದುರುದಾರರ ಅಧ್ಯಕ್ಷತೆಯಲ್ಲಿ ದಿನಾಂಕ:01/10/13ರಂದು ನಡೆದ ಎಸ್‌ಡಿಎಂಸಿ ಸಭೆಯ ನಡವಳಿ ಸಂಖ್ಯೆ:4/2013ರಲ್ಲಿ ತೀರ್ಮಾನಿಸಿದೆ. ಸದರಿ ದಿನಾಂಕದಂದು ಹುದುಕುಳ ಸರ್ಕಾರಿ ಪ್ರೌಢಶಾಲೆಯ ಪ್ರಭಾರಿ ಮುಖ್ಯೋಪಾಧ್ಯಾಯರಾಗಿ 5ನೇ ಎದುರುದಾರರು ಕರ್ತವ್ಯ ನಿರ್ವಹಿಸುತ್ತಿದ್ದರು. ಕಾಮಗಾರಿಯನ್ನು ನಿರ್ವಹಿಸಲು ಟೆಂಡರ್ ಕರೆಯದೇ, ಎಸ್‌ಡಿಎಂಸಿ ಸಭೆಯ ತೀರ್ಮಾನದನ್ವಯ 4ನೇ ಎದುರುದಾರರಿಗೆ ಕಾಮಗಾರಿಯ ಗುತ್ತಿಗೆಯನ್ನು ವಹಿಸಿ, ಪ್ರಭಾರ ಮುಖ್ಯೋಪಾಧ್ಯಾಯರಾದ 5ನೇ ಎದುರುದಾರರು ಮತ್ತು ಎಸ್‌ಡಿಎಂಸಿ ಅಧ್ಯಕ್ಷರಾದ 3ನೇ ಎದುರುದಾರರು ಮೇಲೆ ಹೇಳಿದ ದಿನಾಂಕ:06/03/13 ಮತ್ತು 01/12/14ರ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಜ್ಞಾಪನಗಳಲ್ಲಿನ ಷರತ್ತುಗಳನ್ನು ಮಾತ್ರವಲ್ಲದೇ, ಕೆಟಿಪಿಪಿ ಕಾಯಿದೆ, 2000 ಹಾಗೂ ನಿಯಮಗಳನ್ನು ಉಲ್ಲಂಘಿಸಿದ್ದಾರೆ;

5) ನಾಲ್ಕನೇ ಎದುರುದಾರರು ನಿರ್ವಹಿಸಿದ ಕಾಮಗಾರಿಯ ಬಾಬ್ತು ಭಾಗಶಃ ಹಣ (₹7 ಲಕ್ಷ) ಗಳನ್ನು ಚೆಕ್ ಮೂಲಕ ಬಿಡುಗಡೆ ಮಾಡುವಂತೆ ದಿನಾಂಕ:13/06/14ರಂದು ಎಸ್‌ಡಿಎಂಸಿ ಯು ತೀರ್ಮಾನ ತೆಗೆದುಕೊಂಡ ಸಂದರ್ಭದಲ್ಲಿ 3ನೇ ಎದುರುದಾರರು ಎಸ್‌ಡಿಎಂಸಿ ಅಧ್ಯಕ್ಷರಾಗಿದ್ದು, ಆ ಸಮಯದಲ್ಲಿ (ದಿ:22/11/13 ರಿಂದ) 1ನೇ ಎದುರುದಾರರು ಹುದುಕುಳ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಸದರಿ ಕಟ್ಟಡ ನಿರ್ಮಾಣದ ಬಾಬ್ತು 4ನೇ ಎದುರುದಾರರಿಗೆ ಸಂದಾಯವಾದ ಹಣದ ವಿವರಗಳು ಈ ಕೆಳಗಿನಂತಿದೆ –

| ದಿನಾಂಕ | ಚೆಕ್ ಸಂಖ್ಯೆ | ಮೊತ್ತ ₹ ಗಳಲ್ಲಿ |
|---|---|---|
| 26/10/13 | 867426 | 5,00,000/– |

BD/1815/16

(388)



| | | |
|---|---|---|
| 12/11/13 | 867427 | 2,72,415/– |
| 07/12/13 | 867428 | 5,00,000/– |
| 23/12/13 | 867429 | 1,62,415/– |
| 20/01/14 | 867430 | 7,00,000/– |
| 13/06/14 | 867432 | 7,00,000/– |
| 07/08/14 | 867433 | 2,54,830/– |
| **ಒಟ್ಟು ಮೊತ್ತ** | | 30,89,660/– |

6) ಕ್ರಮ ಸಂಖ್ಯೆ–1 ಮತ್ತು 2ರಲ್ಲಿ ಹೇಳಿದ ಮೊತ್ತವನ್ನು 4ನೇ ಎದುರುದಾರರಿಗೆ ನೀಡುವ ಸಂದರ್ಭದಲ್ಲಿ 5ನೇ ಎದುರುದಾರರು ಹುದುಕುಳ ಪ್ರೌಢಶಾಲೆಯ ಪ್ರಭಾರ ಮುಖ್ಯೋಪಾಧ್ಯಾಯರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಉಳಿದ 5 ಪಾವತಿಗಳ ಸಂದರ್ಭದಲ್ಲಿ 1ನೇ ಎದುರುದಾರರು ಮುಖ್ಯೋಪಾಧ್ಯಾಯರಾಗಿ ಕಾರ್ಯನಿರ್ವಹಿಸಿದ್ದಾರೆ;

7) ದೂರಿನ 2ನೇ ಎದುರುದಾರರು ಖಾಸಗಿ ವ್ಯಕ್ತಿಯಾಗಿದ್ದು, ಸದರಿಯವರನ್ನು ಸರ್ವ ಶಿಕ್ಷಣ ಅಭಿಯಾನ ಯೋಜನೆ ಅಡಿ ಮಂಜೂರಾಗಿದ್ದ ಸಿವಿಲ್ ಕಾಮಗಾರಿಗಳ ಮೇಲ್ವಿಚಾರಣೆಗಾಗಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿದೆಯೆಂದು ಮತ್ತು ಸದರಿಯವರನ್ನು ದಿ:31/03/15ರಂದು ಕರ್ತವ್ಯದಿಂದ ಬಿಡುಗಡೆಗೊಳಿಸಿದೆಯೆಂದು 2ನೇ ತನಿಖಾಧಿಕಾರಿಯ ತನಿಖಾ ವರದಿಯಲ್ಲಿನ ದಾಖಲೆಗಳಲ್ಲಿ ಕಂಡು ಬಂದಿದೆ. ಮುಂದುವರೆದು, ಸದರಿಯವರು ದೂರಿಗೆ ಸಂಬಂಧಿಸಿದ ಶಾಲಾ ಕಟ್ಟಡವನ್ನು ಮೇಲ್ಛಾವಣಿ ಹಂತದವರೆಗೆ ಪರಿಶೀಲಿಸಿದ್ದಾರೆಂದು ಸದರಿಯವರ ಸ್ಥಳ ಭೇಟಿ ಟಿಪ್ಪಣಿಯಲ್ಲಿ ಕಂಡು ಬಂದಿದೆ;

8) ಕರ್ನಾಟಕ ಗ್ರಾಮ ಪಂಚಾಯತ್‌ಗಳ (ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು) (ಮಾದರಿ) ಉಪವಿಧಿಗಳು, 2006 ರಡಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ರಚನೆಯಾಗಿದೆ. 3ನೇ ಉಪವಿಧಿ ಅನ್ವಯ ಶಾಲೆಯ ಮುಖ್ಯ ಶಿಕ್ಷಕರು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಪದನಿಮಿತ್ತ ಸದಸ್ಯರು ಆಗಿದ್ದಾರೆ. ಉಪವಿಧಿ 10ರಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳ ಬಗ್ಗೆ ಹೇಳಿದೆ. ಶಾಲಾ ಆಟದ ಮೈದಾನ, ಆವರಣ ಗೋಡೆಗಳು, ಕೊಠಡಿಗಳು, ಶೌಚಾಲಯ, ಪೀಠೋಪಕರಣ, ಕುಡಿಯುವ ನೀರಿನ ಸೌಲಭ್ಯ, ಮುಂತಾದ ಮೂಲಭೂತ ಸೌಕರ್ಯಗಳು ಹಾಗೂ ಶಾಲೆಗೆ ಅವಶ್ಯವಿರುವ ಇತರೆ ಸೌಕರ್ಯಗಳನ್ನು ಹೆಚ್ಚಿಸಲು ನೆರವು ನೀಡುವುದು. ಇದಕ್ಕಾಗಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಯಾವುದೇ ಕಟ್ಟಡಗಳ ಅಥವಾ ಕಾಮಗಾರಿಗಳ ನಿರ್ಮಾಣ, ನಿರ್ವಹಣೆ, ಮಾರ್ಪಾಡು, ಸುಧಾರಣೆ ಅಥವಾ ಅಭಿವೃದ್ಧಿಯನ್ನು ಕೈಗೊಳ್ಳಲು ಉಪವಿಧಿ 10(ಐ) ರಲ್ಲಿ ಸಮಿತಿಗೆ ಅಧಿಕಾರವಿದೆ. ಆದರೆ, ಕೆಟಿಪಿಪಿ ಕಾಯಿದೆ ಅನ್ವಯ ಟೆಂಡರ್ ಕರೆಯದೇ ಕಾಮಗಾರಿ ಗುತ್ತಿಗೆಯನ್ನು ನೀಡುವ ಅಧಿಕಾರ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಿಲ್ಲ. ಉಪವಿಧಿ 22ರನ್ವಯ ಶಾಲೆಯ ಲಾಭ ಅಥವಾ ಆಸ್ತಿಯ ಯಾವುದೇ ಭಾಗವನ್ನು ವೃತ್ತಿ ವೇತನ ರೂಪದಲ್ಲಾಗಲೀ ಅಥವಾ

(389)



ಅನ್ಯಥಾ ಲಾಭದ ರೂಪದಲ್ಲಾಗಲೀ ಯಾವುದೇ ಸದಸ್ಯರಿಗೆ ಅಥವಾ ಯಾವುದೇ ಸದಸ್ಯರ ಮೂಲಕ ಪಡೆಯಬಯಸುವ ಯಾವುದೇ ವ್ಯಕ್ತಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ವಿನಿಯೋಗಿಸತಕ್ಕದ್ದಲ್ಲ. ಮುಂದುವರೆದು, ಸದಸ್ಯ ಕಾರ್ಯದರ್ಶಿಯು, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಪೂರ್ವಾನುಮೋದನೆಯನ್ನು ಪಡೆದು ಉಪವಿಧಿ 10ರಲ್ಲಿ ನಿರ್ಧಿಷ್ಟ ಪಡಿಸಲಾದ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಲು ಸಮಿತಿಯ ಪರವಾಗಿ ಲಿಖಿತ ಒಪ್ಪಂದಗಳನ್ನು ಮಾಡತಕ್ಕದ್ದು;

9) ಹುದುಕುಳ ಪ್ರೌಢಶಾಲೆಗೆ ಮಂಜೂರಾಗಿರುವ ಐದು ಹೆಚ್ಚುವರಿ ಶಾಲಾ ಕೊಠಡಿಗಳ ನಿರ್ಮಾಣ ಕಾಮಗಾರಿಗೆ ಬಿಡುಗಡೆಯಾದ ಅನುದಾನಕ್ಕೆ ಅಂದಾಜು ಪಟ್ಟಿ ಸಿದ್ಧಪಡಿಸಿ, ಕಡ್ಡಾಯವಾಗಿ ನಿಯಮಾನುಸಾರ ಅನುಮೋದನೆ ಪಡೆಯಬೇಕೆಂದು ಶಿಕ್ಷಣ ಇಲಾಖೆಯ ಆಯುಕ್ತರ ಜ್ಞಾಪನ ಸಂಖ್ಯೆ:ಯೋ11\2014-15\ಆವ್ಯ\ಎಸ್‌ಡಿಪಿ\7\13-14 ದಿನಾಂಕ:01/12/14ರ 2ನೇ ಷರತ್ತಿನಲ್ಲಿ ಹೇಳಿದ್ದರೂ, ಸದರಿ ಕಾಮಗಾರಿಯ ಅಂದಾಜು ಪಟ್ಟಿಗೆ ಎಸ್‌ಡಿಎಂಸಿ ಯು ಅನುಮೋದನೆ ಪಡೆಯದೇ, ಟೆಂಡರ್ ಆಹ್ವಾನಿಸದೇ ದಿನಾಂಕ:01/10/13ರ ಎಸ್‌ಡಿಎಂಸಿ ಸಭೆ ನಡವಳಿಯನ್ವಯ ಕಾಮಗಾರಿಯನ್ನು 4ನೇ ಎದುರುದಾರರಿಗೆ ಲಿಖಿತ ಕರಾರು ಒಪ್ಪಂದವನ್ನು ಮಾಡಿಕೊಳ್ಳದೇ ನೀಡಿರುವುದು ಕಂಡು ಬಂದಿದೆ. ಸದರಿಯವರು ಸಂಪೂರ್ಣ ಕಾಮಗಾರಿಯನ್ನು ಅಂದಾಜು ಪಟ್ಟಿಯನ್ವಯ ನಿರ್ವಹಿಸಿದ್ದಾರೆಂಬ ಬಗ್ಗೆ ಶಾಲಾ ಮುಖ್ಯೋಪಾಧ್ಯಾಯರು \ ಪ್ರಭಾರ ಮುಖ್ಯೋಪಾಧ್ಯಾಯರಾದ 1 ಮತ್ತು 5ನೇ ಎದುರುದಾರರುಗಳು ಹಾಗೂ ಎಸ್‌ಡಿಎಂಸಿ ಅಧ್ಯಕ್ಷರಾದ 3ನೇ ಎದುರುದಾರರು ತಾಂತ್ರಿಕ ಅಭಿಪ್ರಾಯ ಪಡೆಯದೇ, ಗುತ್ತಿಗೆದಾರರಾದ 4ನೇ ಎದುರುದಾರರಿಗೆ ಕಂತುಗಳಲ್ಲಿ ಹಣವನ್ನು ಪಾವತಿ ಮಾಡಿ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಿ, ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ. 4ನೇ ಎದುರುದಾರರು ಎಸ್‌ಡಿಎಂಸಿ ಸದಸ್ಯರಾಗಿದ್ದು, ಕಾಮಗಾರಿಯ ಗುತ್ತಿಗೆ ಪಡೆದು ಲಾಭ ಹೊಂದಿದ್ದಾರೆ ಹಾಗೂ 3ನೇ ಎದುರುದಾರರು, 1 ಮತ್ತು 5ನೇ ಎದುರುದಾರರುಗಳೊಂದಿಗೆ ಸೇರಿ ಕಾಮಗಾರಿಯ ಬಾಬ್ತು ಹಣವನ್ನು 4ನೇ ಎದುರುದಾರರಿಗೆ ಸಂದಾಯ ಮಾಡಿದ್ದಾರೆ. ಕಾರಣ, 1, 3 ರಿಂದ 5ನೇ ಎದುರುದಾರರುಗಳು ಕರ್ನಾಟಕ ಗ್ರಾಮ ಪಂಚಾಯತ್‌ಗಳ (ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು) (ಮಾದರಿ) ಉಪವಿಧಿಗಳು, 2006ರ ನಿಯಮಾವಳಿಗಳನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ.

11. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 1 ಮತ್ತು 5ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

BD/1815/16

390



12. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1 ಮತ್ತು 5ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

13. ದೂರಿನ 2ನೇ ಎದುರುದಾರರು ಹೊರಗುತ್ತಿಗೆ ನೌಕರರಾಗಿದ್ದು, ಸದರಿಯವರು ದಿ:31/03/15ರಂದು ಕರ್ತವ್ಯದಿಂದ ಬಿಡುಗಡೆಗೊಂಡಿರುವುದರಿಂದ, 2ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಟ್ಟಿದೆ.

14. ಅದಲ್ಲದೆ, 1 ಮತ್ತು 5ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 1 ಮತ್ತು 5ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

15. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Anand 10/7

(ನ್ಯಾಯಾಮೂರ್ತಿ ಎನ್.ಆನಂದ)
ಉಪಲೋಕಾಯುಕ್ತ,
ಕರ್ನಾಟಕ ರಾಜ್ಯ.

10/7